ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಬಸವಲಿಂಗಪ್ಪನವರು ನಾನು ಹೇಳುವುದು ಸರಿಯಲ್ಲ ಎಂದು ಏನು ಹೇಳುತ್ತಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಐಆರ್‌ಡಿಪಿ ಕಾರ್ಯಕ್ರಮ ಹರಿಜನ ಗಿರಿಜನರಿಗೆ ಅಷ್ಟಕ್ಕೆ ಸೀಮಿತವಾಗಿಲ್ಲ. ವಾರ್ಷಿಕ ಆದಾಯ ೪,೮೦೦ ರೂಪಾಯಿಯೊಳಗೆ ಯಾರು ಯಾರು ಬರುತ್ತಾರೆ ಅವರೆಲ್ಲರೂ ಈ ಬೆನಿಫಿಟ್ ಪಡೆದುಕೊಳ್ಳಲಿಕ್ಕೆ ಅರ್ಹತೆಯನ್ನು ಹೊಂದಿರುತ್ತಾರೆ. ಕೇಂದ್ರ ಸರ್ಕಾರದ ಆದೇಶದ ಪ್ರಕಾರ ೩೦ ಪರ್‌ಸೆಂಟ್ ಹರಿಜನ ಗಿರಿಜನರಿಗೆ ಸಹಾಯ ಮಾಡಬೇಕೆಂದು ಟಾರ್‌ಗೆಟ್ ಫಿಕ್ಸ್ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಕೇಂದ್ರ ಸರ್ಕಾರದಿಂದ ಏನು ನಿರ್ದೇಶನ ಬಂದಿದೆ ಅದನ್ನು ಓದಿ ಎಂದು ಹೇಳಿದನೇ ಹೊರತು ಅದನ್ನು ವ್ಯಾಖ್ಯಾನ ಮಾಡಲಿಕ್ಕೆ ನಾನು ಹೇಳಲಿಲ್ಲ.

SRI R. V. DESHAPANDE.—If you want the order, I will send it to you. I cannot come with all the orders.

SRI B. BASAVALINGAPPA.—This Minister does not know what is fit and he says about Central Government s directions. What is the Central Government's directions, I want to know. He goes on talking like this.

I say it is 100% but you say it is 46% Please tell me what is the direction of the Central Government. That is all.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಆರ್ಡರ್ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತಾರೆ, ತಾವು ಈಗ ಕುಳಿತುಕೊಳ್ಳಬೇಕು.

## ಬೆಂಗಳೂರಿನಲ್ಲಿ ಬಹುಮಂಹಡಿ ಕಟ್ಟಡಗಳು

೧೮೮೩. ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೧-೮-೧೯೮೫ರಿಂದ ೩೧-೩-೧೯೮೮ರವರೆಗೆ, ಮೂರು ಅಂತಸ್ತುಗಳಿಗೂ ಹೆಚ್ಚಿನ ಕಟ್ಟಡಗಳನ್ನು ಕಟ್ಟಲು, ಬೆಂಗಳೂರು ಮಹಾನಗರ ಪಾಲಿಕೆಯಂ ಕೊಟ್ಟಿರುವ ಒಟ್ಟು ಲೈಸೆನ್ಸ್‌ಗಳ (ಪರವಾನಗಿ) ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ವಾಸ್ತವವಾಗಿ ಕಟ್ಟಲಾಗಿರುವ ಕಟ್ಟಡಗಳ ಸಂಖ್ಯೆ ಎಷ್ಟು ?

ಇ) ಅಂತಹ ಕಟ್ಟಡಗಳು ಟೌನ್ ಪ್ಲಾನಿಂಗ್ ನಿಯಮಗಳಿಗೆ ಅನುಗುಣವಾಗಿವೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೧೯೧.

ಆ) ೪೫.

ಇ) ಹೌದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—೧೯೧ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟುವುದಕ್ಕೆ ಪರವಾನಗಿಯನ್ನು ಕೊಟ್ಟಿದ್ದೇವೆಂದು ತಾವು ಹೇಳಿದ್ದೀರಿ. ಇದರಲ್ಲಿ ರೆಸಿಡೆನ್ಷಿಯಲ್ ಏರಿಯಾದಲ್ಲಿ ಮತ್ತು ಕಮರ್ಷಿಯಲ್ ಏರಿಯಾದಲ್ಲಿ ಎಷ್ಟೆಷ್ಟು ಕೊಟ್ಟಿದ್ದೀರೆಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಒಟ್ಟು ೧೯೧ ಇದೆ. ಇದರಲ್ಲಿ ರೆಸಿಡೆನ್ಷಿಯಲ್, ಕಮರ್ಷಿಯಲ್ public and s mi-public ಎಂದು ೪ ವಿಭಾಗಗಳಾಗಿ ಮಾಡಿದೆ. ಪ್ರತ್ಯೇಕವಾದ ಸಂಖ್ಯೆ ಇಲ್ಲ. ಆದರೆ ಇದರಲ್ಲಿ ೪೫ ಕಂಪ್ಲೀಟ್ ಆಗಿವೆ, ೧೩೩ ನಾನಾ ಹಂತಗಳಲ್ಲಿ ಕೆಲಸವಾಗುತ್ತಿವೆ. ಇನ್ನು ೧೩ ಆಗಬೇಕಾಗಿದೆ. ಯಾವುಯಾವುದು ಎಷ್ಟೆಷ್ಟು ಎಂದು ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅವುಗಳಲ್ಲಿ ವಾಸ್ತವವಾಗಿ ಕಟ್ಟಲಾಗಿರುವ ಕಟ್ಟಡಗಳ ಸಂಖ್ಯೆ ಳಿಸಿ ಎಂದು ಹೇಳಿದ್ದೀರಿ. ಈಗ ನೀವು ಪರವಾನಗಿಯನ್ನು ಕೊಟ್ಟಿರತಕ್ಕ ೧೯೧ರಲ್ಲಿ ಯಾವ ನಿಯಮದ ಪ್ರಕಾರ ಎಷ್ಟು ವರ್ಷಗಳಲ್ಲಿ ಕಟ್ಟಬೇಕೆಂಬ ಆದೇಶದ ಪ್ರಕಾರ ಪರವಾನಗಿಯನ್ನು ಕೊಡಲಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಬಿಡ್ಡಿಂಗ್ ಬೈಲಾಸ್ ಇರುತ್ತದೆ. ಜೋನಲ್ ರೆಗ್ಯುಲೇಷನ್ ಎಂದು ನಿಯಮಗಳಿರುತ್ತವೆ. ಅದರ ಪ್ರಕಾರ ಸ್ಯಾಂಕ್ಷನ್ ಮಾಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ರೆಗ್ಯುಲೇಷನ್ ಏನಿದೆ ? ನಿಯಮ ಎನಿದೆ ? ಏಷ್ಟು ವರ್ಷಗಳವರೆಗೆ ಕಟ್ಟುತ್ತಾರೆ ? ೧೦-೨೦ ವರ್ಷಗಳವರೆಗೆ ಬೇಕಾದರೂ ಕಟ್ಟಬಹುದೆ ?

ಶ್ರೀ ಎಂ. ಚಂದ್ರಶೇಖರ್.—ಸರ್ಕಾರದವರು ಇಂಥಾದ್ದನ್ನು ಕಟ್ಟಿ ಎಂದು ಹೇಳಿದರೆ ಅದನ್ನು ಆ ರೀತಿ ಕಟ್ಟುತ್ತಾರೆಯೇ ಹೊರತು, ಖಾಸಗಿಯವರು ಇಷ್ಟರಲ್ಲೇ ಕಟ್ಟಬೇಕು ಹೀಗೇ ಕಟ್ಟಬೇಕೆಂದು ಯಾವ ನಿಯಮವೂ ಇರುವುದಿಲ್ಲ. ಬೈಲಾ ಪ್ರಕಾರ ಜೋನಲ್ ರೆಗ್ಯುಲೇಷನ್ಸ್ ಪ್ರಕಾರ ನೀವು ಕಟ್ಟಿ ಎಂದು ನಾವು ಪರವಾನಗಿಯನ್ನು ಕೊಟ್ಟಿರುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟುವಕ್ಕೆ ಸಂದರ್ಭದಲ್ಲಿ ಅವುಗಳಿಗೆ ಪರವಾನಗಿಯನ್ನು ಕೊಡಬಾರದೆಂದು ಹೈಕೋರ್ಟಿನ ಆದೇಶ ಇರತಕ್ಕದ್ದು ನಿಜವೆ ? ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟುವ ಬಗ್ಗೆ ಒಂದು ತಾಂತ್ರಿಕ ಸಮಿತಿಯನ್ನು ನೇಮಕ ಮಾಡುವ ಯೋಚನೆ ಸರ್ಕಾರಕ್ಕೆ ಇದಯೇ ? ಈಗ ಬೆಂಗಳೂರಿನಲ್ಲಿರತಕ್ಕ ಯುಟಿಲಿಟಿ ಬಿಲ್ಡಿಂಗ್ ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇದೂ ಕೂಡ ಗಂಗಾರಾಂ ಕಟ್ಟಡದಂತೆ ಆಗಬಹುದಲ್ಲವೆ?

ಶ್ರೀ ಎಂ. ಚಂದ್ರಶೇಖರ್.—ಬಹು ಹಂತಸ್ತಿನ ಕಟ್ಟಡಗಳಿಗೆ ನಿಯಮಗಳಿವೆ. ನಾನು ಈಗಾಗಲೆ ಹೇಳಿದಂತೆ ಜೋನಲ್ ರೆಗ್ಯುಲೇಷನ್, ಎಫ್.ಎ.ಆರ್ ಎಂದು ಇರುತ್ತದೆ. ಎಷ್ಟು ಅಂತಸ್ತುಗಳನ್ನು ಕಟ್ಟಬಹುದು, ರಸ್ತೆ ಅಗಲ, ನಿವೇಶನದ ಅಗಲ, ಇವುಗಳನ್ನೆಲ್ಲಾ ನೋಡಿಕೊಂಡು ಕಟ್ಟಬೇಕಾಗುತ್ತದೆ, ಆದರೆ ಇಂತಿಷ್ಟೇ ಎಂದು ಏನೂ ಇಲ್ಲ. ಬೈಲಾ ಪ್ರಕಾರ ಕಟ್ಟಬೇಕೆಂದಿರುತ್ತದೆ.

ಇನ್ನು ಯಾವುದೋ ಒಂದು ಕಟ್ಟಡ ಸೋರುತ್ತಿದೆಯೆಂದೂ ತಾವು ಹೇಳುತ್ತಿದ್ದೀರಿ. ಅದು ನನ್ನ ಗಮನಕ್ಕೆ ಬಂದಿಲ್ಲ. ಅದು ಯಾವುದು ಎಂದು ಹೇಳಿದರೆ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಧರ್ಮಸಿಂಗ್.—ತಮಗೇ ಗೊತ್ತಿರುವಂತೆ ೧೯೮೦ ರವರೆಗೆ ೮ ಮಹಡಿಗಳನ್ನು ಕಟ್ಟುವುದಕ್ಕೆ ಪರವಾನಗಿಯನ್ನು ಕೊಡುತ್ತಿದ್ದೆವು. ಆದರೆ 1982 actually the then Goverument has stopped it. ಈಗ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ೩ ಅಂತಸ್ತುಗಳನ್ನು ಕಟ್ಟುವಾಗ ನೀವು ಯಾಪ ನಿಯಮಗಳನ್ನು ಪಾಲನೆ ಮಾಡುತ್ತೀರಿ ಎಂದು ಕೇಳಿದ್ದಾರೆ. ಇದನ್ನೆಲ್ಲಾ ನಿಯಂತ್ರಣ ಮಾಡುವುದಕ್ಕೆ ಕಾರ್ಪೊರೇಷನ್ನಿಂದ ಬಿಲ್ಡಿಂಗ್ ಬೈಲಾ ಬೇಕಾಗುತ್ತದೆ. ೧೯೮೦ರಲ್ಲಿ ಬಿಲ್ಡಿಂಗ್ ಬೈಲಾ ಮಾಡಬೇಕೆಂದು ನಾವು ಪ್ರಾರಂಭ ಮಾಡಿದೆವು. ಈಗಾಗಲೇ ೫ ವರ್ಷಗಳು ಕಳೆದರೂ ಕೂಡ ಇನ್ನೂ ಆ ಬೈಲಾ ಆಗಿಲ್ಲ. ಈ ಬಿಲ್ಡಿಂಗ್ ಬೈಲಾನನ್ನು ಏತಕ್ಕೆ ಕಾರ್ಪೊರೇಷನ್‌ನವರು ತಡ ಮಾಡುತ್ತಿದ್ದಾರೆ ಎಂದು ನಾವು ಕೇಳುತ್ತಿದ್ದೇವೆ ಯಾವಾಗ ಈ ಬಿಲ್ಡಿಂಗ್ ಬೈಲಾವನ್ನು ಮಾಡುತ್ತೀರಿ? ಎಲ್ಲಿಯವರೆಗೆ ನೀವು ಈ ಬಿಲ್ಡಿಂಗ್ ಬೈಲಾವನ್ನು ಮಾಡುವುದಿಲ್ಲ ಅಲ್ಲಿಯವರೆಗೂ ಇದನ್ನು ನೀವು ನಿಯಂತ್ರ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಹಿಂದೆ ಗಂಗಾರಾಂ ಕಟ್ಟಡದ ದುರಂತದ ಬಗ್ಗೆ ಈ ಸದನದಲ್ಲಿ ಪ್ರಸ್ತಾಪವಾಗಿತ್ತು. ದೇಸಾಯಿ ವರದಿ ಕೂಡ ತಮ್ಮ ಹತ್ತಿರವೇ ಇದೆ. ಆದರಲ್ಲಿ ಯಾವ ಅಧಿಕಾರಿಗಳು ತಪ್ಪಿತಸ್ಥರು, ಯಾರ ಕಾಲದಲ್ಲಿ ಏನಾಗಿದೆ, ಎನ್ನುವಕ್ಕ ಬಗ್ಗೆ ಸರ್ಕಾರಕ್ಕೆ ವರದಿ ಬಂದಿರೂ ಕೂಡ ಇಮವರೆಗೂ ನೀವು ಯಾವುದೇ ಕ್ರಮವನ್ನೂ ಇದರ ಬಗ್ಗೆ ತೆಗೆದುಕೊಂಡಿಲ್ಲ. ನೀವು ಯಾವಾಗ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ೧೯೮೪ರಲ್ಲಿ ಇದ್ದಂಥ ಬಿಲ್ಡಿಂಗ್ ಬೈಲಾಸ್ ಜಾರಿಯಲ್ಲಿದೆ. ನಾಲ್ಕು ವರ್ಷಗಳ ಅನುಭವದಮೇಲೆ, ಕೆಲವಾರು ಸಮಸ್ಯೆಗಳು ಬಂದಿರುವುದರ ಮೇಲೆ ಸಾರ್ವಜನಿಕರು ಹೇಳಿರುವುದರ ಮೇಲೆ ಆರ್ಕಿಟೆಕ್ಚರ್ಸ್ ದೊಡ್ಡ ದೊಡ್ಡ ಪರಿಣತರುಎಂಥವರು ಕೆಲವು ಸೂಚನೆಗಳನ್ನು ಹೇಳಿದ್ದಾರೆ. ಮತ್ತೆ ದೇಸಾಯಿ ಕಮಿಷನ್ ಸಹ ಕೆಲವು ಸೂಚನೆಗಳನ್ನು

ಕೊಟ್ಟು ಈರೀತಿ ಮಾಡಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ನಾವು ಒಂದು ಸಬ್ ಕಮಿಟಿಯನ್ನು ಮಾಡಿದ್ದೇವೆ. ನಗರ-ಪಾಲಿಕಾ ಆಯುಕ್ತರು ಮತ್ತು ಪರಿಣತರುಗಳಿಂದ ವರದಿ ಬಂದಿದೆ. ಅದನ್ನು ಪರಿಶೀಲನೆ ಮಾಡಿ ನಗರ-ಪಾಲಿಕೆಯವರಿಗೆ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದೇವೆ. ಒಪ್ಪಿಗೆ ಬಂದಮೇಲೆ ಅಧಿಸೂಚನೆಯನ್ನು ನೋಡುತ್ತೇವೆ. ಈ ಸಮಿಕ್ಷೆಯಲ್ಲಿ ಆಯುಕ್ತರು, ಅಧ್ಯಕ್ಷರು, ನಗರ-ಪಾಲಿಕೆ ನಿರ್ದೇಶಕರು, ಚೀಫ್ ಆರ್ಕಿಟೆಕ್ಟ್ ಡಿ. ಟಿ ವಿಶ್ವನಾಥ ಎಂದು ಇದ್ದಾರೆ, ಮತ್ತು ಅಧ್ಯಕ್ಷರ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕರ್ನಾಟಕ, ಇದೇ ಮುಂತಾದವರಿಂದ-ಜನ ಪರಿಣತರನ್ನು ಸೇರಿಸಿ ಒಂದು ಪುನರ್ ಪರಿಶೀಲನಾ ಸಮಿತಿಯನ್ನು ಮಾಡಿದ್ದೇವೆ. ಅವರಿಂದ ಒಂದು ವರದಿ ಬಂದಿದೆ ಇಷ್ಟರಲ್ಲೇ ಅದರ ಬಗ್ಗೆ ಎಕ್ಸಾಮಿನ್ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ಸ್ವಲ್ಪ ಕೇಳಿರಿ. ಪ್ರಶ್ನೋತ್ತರವೇಳೆ ೨೫ಕ್ಕೆ ಪ್ರಾರಂಭವಾಯಿತು. ಈಗ ೩-೧೫ ಆಗುತ್ತಿದೆ. ಒಂದು ಗಂಟೆಯಾಯಿತು. ನೀವು ವಿರೋಧಪಕ್ಷದ ನಾಯಕರು ಇದ್ದೀರಿ. ಈಗ ಏನು ಮಾಡಬೇಕು ಹೇಳಿ. ಈಗ ಪ್ರಶ್ನೋತ್ತರವೇಳೆ ಮುಗಿಯಿತು ಎಂದು ಹೇಳಲಿಕ್ಕೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಕಂಟ್ರೋಲ್ ಮಾಡಿ, ಒಂದು ತಾಸಿನಲ್ಲಿ ಮಾಡಿದ್ದೀರಿ. ನಮ್ಮ ಆಭ್ಯಂತರವೇನಿಲ್ಲ.

ಅಧ್ಯಕ್ಷರು.—ಎಲ್ಲರೂ ಸಪ್ಲಿಮೆಂಟರಿಯನ್ನು ಕೇಳುವುದಕ್ಕೆ ಶುರುಮಾಡಿದರೆ ಏನು ಮಾಡುವುದು

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಯಾರನ್ನು ಕರೆಯುತ್ತೀರೋ ಅವರು ಕೇಳುತ್ತಾರೆ.

ಅಧ್ಯಕ್ಷರು.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈಗ ೧೧ ಪ್ರಶ್ನೆಗಳು ಇವೆ. ಅವುಗಳನ್ನು ಲ್ಯಾಪ್ಸ್ ಮಾಡುವುದಿಲ್ಲ. ಪ್ರಶ್ನೋತ್ತರವೇಳೆ ಮುಗಿದಿದ್ದರೂ, ಎಲ್ಲರ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತೊಮ್ಮೆ ಗೈರು ಹಾಜರಾದವರನ್ನು ಕರೆಯುತ್ತೇನೆ. ಯಾರಾ ಪ್ರಶ್ನೆ ಕೇಳಿದ್ದಾರೋ ಅವರಿಗೆ ಮಾತ್ರ ಕೇಳಲು ಅವಕಾಶ ಕೊಡುತ್ತೇನೆ.

## ಕೊಡಚಾದ್ರಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

೨೫೫೯. ಶ್ರೀ ಬಿ. ಸ್ವಾಮಿರಾವ್, (ಹೊಸನಗರ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಹೊಸನಗರ ತಾಲ್ಲೂಕು ಕೊಡಚಾದ್ರಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಯೋಜನೆ ಯಾವ ಹಂತದಲ್ಲಿದೆ ?

೨) ಕೊಡಚಾದ್ರಿಯನ್ನು ಹೆಲಿಪ್ಯಾಡ್ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್, (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

೧) ಕೊಡಚಾದ್ರಿ ಬೆಟ್ಟವನ್ನು ಪ್ರವಾಸಿಧಾಮವೆಂದು ಗುರುತಿಸಲಾಗಿದೆ. ಬೆಟ್ಟಕ್ಕೆ ರಸ್ತೆ ನಿರ್ಮಾಣವಾದ ಮೇಲೆ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು.

೨) ಇಲ್ಲ.

ಶ್ರೀ ಬಿ ಸ್ವಾಮಿರಾವ್,—ಇದು ನನ್ನ ಕ್ಷೇತ್ರ ಮತ್ತು ನನ್ನ ಊರಿಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಮಾನ್ಯ ಸಚಿವರುಕೆ ನೀಡಿದ ಉತ್ತರದಲ್ಲಿ ಕೊಡಚಾದ್ರಿ ಬೆಟ್ಟವನ್ನು ಪ್ರವಾಸಿ ಧಾಮವೆಂದು ಗುರುತಿಸಲಾಗಿದೆ. ಬೆಟ್ಟಕ್ಕೆ ರಸ್ತೆ ನಿರ್ಮಾಣವಾದಮೇಲೆ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಈಗಾಗಲೇ ರಸ್ತೆ ಆಗಿಬಿಟ್ಟಿದೆ.